





ಅವಧಿಗೆ ಮುನ್ನವೇ ಮಗು ಜನನ, ಹಾರ್ಮೋನ್ ಅಸಮತೋಲನವಲ್ಲದೇ ಗರ್ಭಕೋಶದ ಸಮಸ್ಯೆಯಾದ ಎಂಡೊಮೆಟ್ರಿಯೋಸಿಸ್ ಕಾಣಿಸಿಕೊಳ್ಳಬಹುದು' ಎನ್ನುತ್ತಾರೆ ಪ್ರಸಾಧನ ಮತ್ತು ಕೇಶ ತಜ್ಞ ಡಾ.ಪ್ರವೀಣ್ ಎಸ್. ಶೆಟ್ಟಿ.

### ಐಲೈನರ್/ ಮಸ್ಕಾರ

ಕಣ್ಣಿನ ಅಂದ ಹೆಚ್ಚಿಸುವ ಮೂಲಕ ಇಡೀ ಮುಖದ ಸೌಂದರ್ಯವನ್ನು ಬದಲಿಸುವ ಈ ಸೌಂದರ್ಯವರ್ಧಕ ಮುಖ್ಯವಾಗಿ ಕಾರ್ಬನ್ ಬ್ಲ್ಯಾಕ್ ವರ್ಣದ್ರವ್ಯ ಹೊಂದಿದ್ದು, ಶ್ವಾಸಕೋಶಕ್ಕೆ ಧಕ್ಕೆ ಉಂಟು ಮಾಡುವುದಲ್ಲದೆ, ತೀವ್ರತರದ ಉರಿಯೂತ ಉಂಟು ಮಾಡಬಲ್ಲದು. ಸತು, ಪಾದರಸ, ಆರ್ಸೆನಿಕ್ ಮೊದಲಾದ ಭಾರ ಲೋಹಗಳು ಕ್ಯಾನ್ಸರ್‌ಕಾರಕಗಳಾದರೆ, ಕ್ವಾಟರ್ನಿಯಮ್ ಎಂಬ ರಾಸಾಯನಿಕ ಫಾರ್ಮಾಲ್ಡಿಹೈಡ್ ಎಂಬ ಅಪಾಯಕಾರಿ ಅನಿಲವನ್ನು ಬಿಡುಗಡೆ ಮಾಡುತ್ತದೆ. ಚರ್ಮದ ಅಲರ್ಜಿ, ಹಾರ್ಮೋನ್ ಅಸಮತೋಲನ ಕೂಡಾ ಉಂಟಾಗಬಹುದು.

### ಡಿಯೊಡರೆಂಟ್

ದೇಹದ ದುರ್ಗಂಧ ಓಡಿಸಿ ತಾಜಾತನ, ಸುವಾಸನೆ ಹೊರಸೂಸುವಂತೆ ಮಾಡುವ ಡಿಯೊಡರೆಂಟ್‌ನಲ್ಲೂ ಅಲ್ಯೂಮಿನಿಯಂ, ಪ್ಯಾರಾಬೆನ್, ಕೀಟನಾಶಕ ಟ್ರೈಕ್ಲೋಸನ್ (ಇದು ಅಪಾಯಕಾರಿ ಕ್ಲೋರೊಫಾರ್ಮ್ ಹೊರಸೂಸುತ್ತದೆ), ನಿರ್ನಾಳ ಗ್ರಂಥಿ ವ್ಯವಸ್ಥೆಯನ್ನು ಹಾಳು ಮಾಡುವ ಥಾಲೇಟ್ಸ್ ಮೊದಲಾದವುಗಳಿರುತ್ತವೆ. ಇದರಿಂದ ಸ್ತನ ಹಾಗೂ ಪ್ರಾಸ್ಟೇಟ್ ಕ್ಯಾನ್ಸರ್, ಅಲ್ಝೈಮೇರ್, ಸಂತಾನಹೀನತೆ ಬರಬಹುದಾದ ಸಾಧ್ಯತೆ ಇದ್ದು, ನರವ್ಯೂಹ ವ್ಯವಸ್ಥೆಯನ್ನು ಹಾಳು ಮಾಡಬಹುದು. ಹೃದಯ ಮತ್ತು ಯಕೃತ್ತಿಗೆ ಹಾನಿ ಉಂಟು ಮಾಡಬಹುದು.

### ಫೌಂಡೇಶನ್

ಮೇಕಪ್‌ಗೆ ಬಳಸುವ ಫೌಂಡೇಶನ್ ಕ್ರೀಮ್‌ನಲ್ಲಿ ಕೂಡಾ ಸತು, ಅತಿ ನೇರಳೆ ಕಿರಣದಿಂದ ರಕ್ಷಿಸುವ ಒಕ್ಸಿನೊಕ್ಸೇಟ್, ತ್ವಚೆ ಹಾಗೂ ಶ್ವಾಸಕೋಶಕ್ಕೆ ಹಾನಿ ಉಂಟು ಮಾಡುವ ಅಸಿಟಿಕ್ ಆಮ್ಲವಿದೆ. ಕ್ಯಾನ್ಸರ್, ಗರ್ಭಸ್ರಾವ, ಥೈರಾಯ್ಡ್, ಚರ್ಮದ ಅಲರ್ಜಿ, ತುರಿಕೆ, ಬೊಕ್ಕೆ ಏಳುವುದು.. ಹೀಗೆ ಹಲವಾರು ಸಮಸ್ಯೆಗಳು ತಲೆದೋರಬಹುದು.

### ನೈಲ್ ಪಾಲಿಷ್

ಉಗುರಿನ ಅಂದಕ್ಕೆ ಹಚ್ಚಿಕೊಳ್ಳುವ ರಂಗಿನಲ್ಲೂ ಏನೆಲ್ಲಾ ವಿಷಕಾರಿ ಅಂಶ ಅಡಗಿದೆ ಎಂದು ಗೊತ್ತಾದರೆ ಆ ಅಂದಚೆಂದವೇ ಬೇಡ ಎಂದು ಖಂಡಿತ ದೂರವುಳಿಯುತ್ತೀರಿ. ಇದರಲ್ಲೂ ಕೂಡಾ ಹಾರ್ಮೋನ್ ಸಮಸ್ಯೆಗೆ ಕಾರಣವಾಗುವ ಥಾಲೇಟ್ ಇದ್ದು, ಫಾರ್ಮಾಲ್ಡಿಹೈಡ್, ಭಾರ ಲೋಹಗಳಾದ ಸೀಸ, ಸತು, ಆರ್ಸೆನಿಕ್, ಪಾದರಸ, ಕ್ರೋಮಿಯಂ, ಕಬ್ಬಿಣದ ಅಂಶಗಳಿವೆ. ನಿರಂತರ ಬಳಕೆಯಿಂದ ಹುಟ್ಟುವ ಮಗುವಿನಲ್ಲಿ ಅಂಗಾಂಗ ಊನವಾಗಬಹುದು. ಅವಧಿಗಿಂತ ಮುನ್ನ ಮಗುವಿನ ಜನನವಾಗಬಹುದು. ಶ್ವಾಸನಾಳದಲ್ಲಿ ತೊಂದರೆ ಸಂಭವಿಸಬಹುದು.

### ಟಾಲ್ಕಂ ಪೌಡರ್

ಕ್ಯಾನ್ಸರ್‌ಕಾರಕ ಆಸ್ಬೆಸ್ಟೋಸ್, ಟೈಟಾನಿಯಂ ಆಕ್ಸೈಡ್ ಹೊಂದಿರುವ ಪೌಡರ್ ಶ್ವಾಸಕೋಶದ ಕ್ಯಾನ್ಸರ್, ಅಂಡಾಶಯದ ಕ್ಯಾನ್ಸರ್, ಚರ್ಮದ ಅಲರ್ಜಿ ಮತ್ತು ಉರಿಯನ್ನು ಉಂಟು ಮಾಡಬಹುದು.

'ಇಂತಹ ಸೌಂದರ್ಯವರ್ಧಕಗಳ ಬಳಕೆಯಿಂದ ಮುಖ ಅಥವಾ ಕೈಕಾಲುಗಳ ಮೇಲೆ ಬದಲಾವಣೆ ಕಂಡಾಕ್ಷಣ ತಜ್ಞ ವೈದ್ಯರನ್ನು ಸಂಪರ್ಕಿಸಿ. ನಿರ್ಲಕ್ಷ್ಯ ಮಾಡಿದರೆ ಉಲ್ಬಣಿಸಬಹುದು' ಎನ್ನುತ್ತಾರೆ ಪ್ರಸಾಧನ ಮತ್ತು ಕೇಶ ತಜ್ಞ ಡಾ.ಅನಿಲ್ ಅಬ್ರಹಾಂ.

ಚೆನ್ನಾಗಿ ಕಾಣಿಸಬೇಕು ಎಂಬ ತುಡಿತ ಹಲವರಿಗಿರುವುದು ಸಹಜ. ಹಾಗಾದರೆ ಏನು ಮಾಡಬೇಕು? ಇಂತಹ ರಾಸಾಯನಿಕಗಳಿಲ್ಲದ ಸೌಂದರ್ಯವರ್ಧಕಗಳು, ಶಾಂಪೂ ಮೊದಲಾದವುಗಳನ್ನು ಖರೀದಿಸಿ ಎನ್ನುತ್ತಾರೆ ತಜ್ಞರು. ಆದರೆ ಹೆಚ್ಚಿನ ಸಂದರ್ಭದಲ್ಲಿ ಲೇಬಲ್‌ನಲ್ಲಿರುವ ಅಂಶಗಳು ತಪ್ಪು ದಾರಿಗೆ ಎಳೆಯುವಂತಹವು. ಸಂಪೂರ್ಣ ಮಾಹಿತಿಯನ್ನು ಬಹಿರಂಗಪಡಿಸುವುದಿಲ್ಲ. ಆದರೂ ಅವುಗಳನ್ನು ಸರಿಯಾಗಿ ಓದಿ ನೀವು ನಿತ್ಯ ಬಳಸುವ ಸೌಂರ್ಯವರ್ಧಕಗಳಲ್ಲಿ ಈ ಕೆಲವು ವಿಷಕಾರಿ ರಾಸಾಯನಿಕಗಳಿವೆಯೇ ಎಂಬುದನ್ನು ಗಮನಿಸಬಹುದು.

★ ಫಾರ್ಮಾಲ್ಡಿಹೈಡ್, ಫೆನಾಸಿಟಿನ್, ಕೋಲ್ ಟಾರ್, ಬೆಂಜೀನ್, ಇಥಿಲೀನ್ ಆಕ್ಸೈಡ್, ಸೀಸ ಮತ್ತು ಆರ್ಸೆನಿಕ್. ಈ ಅಂಶಗಳಿರುವ ಉತ್ಪನ್ನಗಳನ್ನು ಖರೀದಿಸಬೇಡಿ.

★ ಫ್ರಾಗ್ರನ್ಸ್ ಅನ್ನು ಪಟ್ಟಿಯಲ್ಲಿರುವ ಅಂಶಗಳಲ್ಲಿ ಸೇರಿಸಿದ್ದರೆ ಅದನ್ನು ಬಳಸಬೇಡಿ. ಸಸ್ಯಮೂಲದ ತೈಲ ಹಾಗೂ ನೈಸರ್ಗಿಕ ಸುಗಂಧದ್ರವ್ಯವಿರುವ ಉತ್ಪನ್ನಗಳನ್ನು ಬಳಸಿ.

★ ಸೀಸವನ್ನು ಹೆಚ್ಚು ಕಡಿಮೆ ಎಲ್ಲಾ ಉತ್ಪನ್ನಗಳಲ್ಲಿ ಬಳಸಲಾಗುವುದು. ಬಣ್ಣದಲ್ಲಿ ಇದು ಮಿಶ್ರವಾಗಿರುತ್ತದೆ. ಸ್ವಲ್ಪ ಪ್ರಮಾಣದಲ್ಲಿ ಉತ್ಪನ್ನಗಳನ್ನು ತಯಾರಿಸುವ ಬ್ರ್ಯಾಂಡ್‌ಗೆ ಒತ್ತು ನೀಡಿ. ಅವು ಗುಣಮಟ್ಟಕ್ಕೆ ಹೆಚ್ಚು ಒತ್ತು ನೀಡುತ್ತವೆ. ಇಲ್ಲದಿದ್ದರೆ ಹಣ್ಣಿನ ಸಾರವನ್ನು ಬಳಸಿದ ಉತ್ಪನ್ನಗಳನ್ನು ಖರೀದಿಸಿ.

★ ಟಾಲ್ಕ್ ಇರುವ ಉತ್ಪನ್ನಗಳನ್ನು ಹೊಟ್ಟೆ ಮತ್ತು ಅದರ ಕೆಳಭಾಗದಲ್ಲಿ ಬಳಸಬೇಡಿ. ವೃಷಣ, ಅಂಡಾಶಯದ ಕ್ಯಾನ್ಸರ್ ಬರಬಹುದು.

★ ಜೇನು, ಟೀ ಟ್ರೀ ತೈಲ, ವಿಟಮಿನ್ ಇ, ರೋಸ್‌ಮೆರಿ ಹಾಗೂ ಚಕ್ಕೋತ ಹಣ್ಣಿನ ಬೀಜದ ಸಾರ ಬಳಸಿದ ಉತ್ಪನ್ನಗಳನ್ನು ಬಳಸಬಹುದು.

★ ರಾಸಾಯನಿಕಗಳಿರುವ ಉತ್ಪನ್ನಗಳ ಬಳಕೆ ಆದಷ್ಟು ಕಡಿಮೆ ಮಾಡಿ.

★ ಮನೆಯಲ್ಲೇ ಮಾಡಬಹುದಾದ ಆರೈಕೆಗೆ ಆದ್ಯತೆ ಕೊಡಿ. ■